ಬಂಟಿ: ಸೊಳ್ಳೆಗಳು ಏಕೆ ಅಷ್ಟು ವಿಶ್ವಾಸದಿಂದ ಹಾರಾಡುತ್ತವೆ?
ಬಬ್ಲಿ: ಏಕೆಂದರೆ ಅವು ಎಲ್ಲಿ ಹೋದರು ಜನ ಚಪ್ಪಾಳೆ ಹೊಡೆಯುತ್ತಾರೆ ಅದಕ್ಕೆ.

ಟೀಚರ್: ಪರೀಕ್ಷೆ ಹತ್ತಿರ ಬರುತ್ತಿದೆ. ಆದರೂ ನೀನು ಸ್ಕೂಲಿಗೇಕೆ ಬರುತ್ತಿಲ್ಲ?
ಗುಂಡ: ಪರೀಕ್ಷೆಯಲ್ಲಿ ಕಾಪಿ ಮಾಡಲು ಚೀಟಿಗಳನ್ನು ಮಾಡಿಕೊಳ್ಳಲು ಟೈಮ್ ಬೇಕಲ್ವ ಅದಕ್ಕೆ ಶಾಲೆಗೆ ಬರ್ತಿಲ್ಲ.

ರಾಜೇಶ್: ಮುಂಜಾನೆಯಿಂದ ನದಿಯಲ್ಲೇ ಈಜುತ್ತಿದ್ದೀರಿ ಯಾಕೆ ಸರ್! ಗಿನ್ನಿಸ್ ರೆಕಾರ್ಡ್ ಮಾಡೋಕೆ ಏನಾದ್ರೂ ಟ್ರೈ ಮಾಡ್ತಾ ಇದೀರಾ ಹೇಗೆ?
ರಾಕೇಶ್: ಅದೆಲ್ಲ ಏನೂ ಇಲ್ಲ ರೀ... ನಾನು ಈಜಲು ನದಿಗೆ ಇಳಿದ ತಕ್ಷಣ ದಡದ ಮೇಲಿದ್ದ ನನ್ನ ಬಟ್ಟೆಗಳನ್ನು ಯಾರೋ ಕಳ್ಳತನ ಮಾಡಿದ್ದಾರೆ.

ಅತ್ತೆ: ಯಾಕಮ್ಮ ಕೈ ಖಾಲಿ ಇದೆ?
ಸೊಸೆ: ಮೊಬೈಲ್ ಚಾರ್ಜ್‌ಗೆ ಹಾಕಿ ಕಬೋರ್ಡ್ ಮೇಲಿಟ್ಟಿದ್ದೀನಿ ಅತ್ತೆ.
ಅತ್ತೆ: ನಿನ್ನ ಮುಖಕ್ಕಿಷ್ಟು, ನಾನು ಕೇಳಿದ್ದು ಬಳೆ ಯಾಕೆ ಹಾಕಿಕೊಂಡಿಲ್ಲ ಅಂತ.


ಪ್ರಿಯಾ: ಯಶಸ್ಸನ್ನು ಹೇಗೆ ತೂಕ ಮಾಡುತ್ತಾರೆ?
ಶ್ರೇಯಾ: ಅಷ್ಟು ಗೊತ್ತಿಲ್ವಾ? ಇನ್‌ಸ್ಟಾಗ್ರಾಂನಲ್ಲಿ ವಿಡಿಯೊಗಳನ್ನು ನೋಡಿ ತೂಕ ಮಾಡುತ್ತಾರೆ.

ಗಂಡ: ನಿನ್ನೆ ಊರಿಗೆ ಹೋಗಲಿಲ್ವ?
ಹೆಂಡತಿ: ಟಿಕೆಟ್ ತಗೊಂಡು ಹೋಗುವಷ್ಟರಲ್ಲಿ ರೈಲು ನನ್ನ ಬಿಟ್ಟು ಹೋಗ್ಬಿಟ್ಟಿತ್ತು.
ಗಂಡ: ಇವತ್ತಾದ್ರೂ ಸಮಯಕ್ಕೆ ಸರಿಯಾಗಿ ಹೋಗಬೇಕಿತ್ತು.
ಹೆಂಡತಿ: ಇವತ್ತು ಸರಿಯಾದ ಸಮಯಕ್ಕೆ ಹೋಗಿ ಟಿಕೆಟ್ ತಗೊಂಡು ಹೋದೆ. ರೈಲು ನಿಂತಿತ್ತು. ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಲು ನಾನೇ ರೈಲು ಬಿಟ್ಟು ಮನೆಗೆ ವಾಪಸ್ ಬಂದೆ.




ತಿಮ್ಮ: ಡಾಕ್ಟ್ರೇ ,ಡಾಕ್ಟ್ರೇ... ನನಗೆ ಅರ್ಜೆಂಟಾಗಿ ಕನ್ನಡಕ ಬೇಕು.
ಗುಂಡ: ನಿಜ ನಿಮಗೆ ಅರ್ಜೆಂಟಾಗಿ ಕನ್ನಡಕ ಬೇಕೆ ಬೇಕು ನೋಡಿ. ಏಕೆಂದರೆ ನೀವು ಬಂದದ್ದು ಡಾಕ್ಟರ್ ಕ್ಲಿನಿಕಿಗಲ್ಲ ಬೇಕರಿಗೆ.

ಗಂಡ: ಅರೇ ವಾವ್!.. ಇವತ್ತು ಮನೆಯೆಲ್ಲ ಎಷ್ಟು ಕ್ಲೀನ್ ಆಗಿ ಇಟ್ಟಿದ್ದೀಯ. ಯಾಕೆ ಇವತ್ತು ವಾಟ್ಸ್‌ಆ್ಯಪ್, ರೀಲ್ಸ್ ಅಂತ ಮೊಬೈಲ್ ನೋಡಲಿಲ್ವ?
ಹೆಂಡತಿ: ಮೊಬೈಲ್ ಸಿಗ್ತಾ ಇರಲಿಲ್ಲ. ಅದನ್ನು ಹುಡುಕಲು ಎಲ್ಲಾ ಸಾಮಾನುಗಳನ್ನು ಎತ್ತಿ ನೋಡಿ ಸರಿಯಾಗಿ ಇಡ್ತಾ ಹೋದೆ. ಮನೆ ಆಟೊಮ್ಯಾಟಿಕ್ ಆಗಿ ಕ್ಲೀನ್ ಆಯ್ತು.




ಟೀಚರ್ ಗುಂಡನಿಗೆ ಚೆನ್ನಾಗಿ ಹೊಡೀತಾ ಇದ್ರು. ಅಲ್ಲೇ ಬರುತ್ತಿದ್ದ ಪ್ರಿನ್ಸಿಪಾಲ್ ಟೀಚರ್‌ನ ಕೇಳಿದರು.
ಪ್ರಿನ್ಸಿಪಾಲ್: ಯಾಕ್ರೀ ಅವ್ನಿಗೆ ಹೊಡೀತಾ ಇದ್ದೀರಾ?
ಟೀಚರ್: ಸರ್ ಗಾಂಧಿ ಬಗ್ಗೆ ಪ್ರಬಂಧ ಬರಿ ಅಂದ್ರೆ ಪೂಜಾ ಗಾಂಧಿ ಬಗ್ಗೆ ಬರ್ದಿದ್ದಾನೆ.

ಗುಂಡ: ಕಾಂಗರೂ ಮನೆಗಿಂತ ಎತ್ತರ ಜಿಗಿಯಬಲ್ಲದೇ?
ತಿಮ್ಮ: ನಿಸ್ಸಂದೇಹವಾಗಿ ಏಕೆಂದರೆ ಮನೆಗೆ ಜಿಗಿಯಲು ಆಗುವುದಿಲ್ಲವಲ್ಲ.

ತಿಮ್ಮ: ದೇವರುಗಳು ಯಾಕೆ ಸ್ವರ್ಗ ಲೋಕದಲ್ಲಿರ್ತಾರೆ?
ಗುಂಡ: ತಾವು ಸೃಷ್ಟಿಸಿದವುಗಳಿಗೆ ಹೆದರಿ.

ಗುಂಡ: ಗಾಂಧೀಜಿ ಸಾಯೋಕೆ ಮುಂಚೆ ಹೇಗಿದ್ರು ಗೊತ್ತಾ?
ತಿಮ್ಮ: ಜೀವಂತವಾಗಿ ಇದ್ರು.

ಕಲ್ಲೇಶಿ: ಲವ್ ಮಾಡಿ ಮದುವೆ ಆಗೋದು ಒಳ್ಳೆಯದಾ? ಮದುವೆ ಆಗಿ ಲವ್ ಮಾಡೋದು ಒಳ್ಳೆಯದಾ?
ಮಲ್ಲೇಶಿ: ಮದುವೆ ಆಗಿ ಲವ್ ಮಾಡೋದು ಒಳ್ಳೆಯದ್ದು. ಆದ್ರೆ ಹೆಂಡ್ತಿಗೆ ಗೊತ್ತಾಗ್ಬಾರ್ದು ಅಷ್ಟೆ.

ರಮೇಶ: ಗರ್ಲ್ ಫ್ರೆಂಡ್ ಅಂದ್ರೆ ಯಾರು?
ಸುರೇಶ್: ಯಾವಳು ಒಬ್ಬ ಹುಡುಗನನ್ನು ಒಂದೇ ವರ್ಷದೊಳಗಾಗಿ ಸಂಪೂರ್ಣವಾಗಿ ಬದಲಾಯಿಸುತ್ತಾಳೋ ಮತ್ತು ಒಂದು ವರ್ಷದ ನಂತರ 'ನೀನೀಗ ಮೊದಲಿನಂತಿಲ್ಲ, ತುಂಬಾ ಬದಲಾಗಿದ್ದೀಯ... ಐ ಹೇಟ್ ಯು' ಅನ್ನುತ್ತಾಳೋ ಅವಳು.

ಭಿಕ್ಷುಕ: ಸರ್, ಭಿಕ್ಷೆ ಹಾಕಿ, ಮೂರು ದಿನದಿಂದ ಊಟ ಮಾಡಿಲ್ಲ.
ಗುಂಡ: ನಿನ್ನಲ್ಲಿ ನೂರು ರೂಪಾಯಿ ಚಿಲ್ಲರೆ ಇದೆಯಾ?
ಭಿಕ್ಷುಕ: ಇದೆ ಸರ್!
ಗುಂಡ: ಹಾಗಾದ್ರೆ ಮೊದಲು ಆ ದುಡ್ಡಿನಿಂದ ಊಟ ಮಾಡು.

ಸಂಗ್ರಹ: ಶರದ ಕುಲಕರ್ಣಿ, ಬೀದರ್